<u>ದಿನಾಂಕಃ **26-8-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪ್ರತಿವಾದಿ ಪರ ಪಾಟೀ ಸವಾಲು ಶ್ರೀ ಕೆ.ಎಸ್.ವಿ. ವಕೀಲರಿಂದಃ-</u>

ದುಗ್ಗಪ್ಪ ನನಗೆ ತಂದೆಯಾಗಬೇಕು. ನನ್ನ ತಂದೆಗೆ ಮಂಡಿನೋವಿನಿಂದ ಬಳಲುತ್ತಿದ್ದಾರೆ. ನನ್ನ ತಂದೆಗೆ 57 ವರುಷ ವಯಸ್ಸಾಗಿದೆ. ನನ್ನ ತಂದೆಗೆ ಮಂಡಿನೋವು ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ. ನನ್ನ ತಂದೆಗೆ ಮಂಡಿನೋವು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ದಾವಾ ಆಸ್ತಿಯನ್ನು ಪ್ರಭಾಕರ ಬಿನ್ ಗೋವಿಂದರಾಯ್ಕರ್‌ರವರ ಕಡೆಯಿಂದ ಖರೀದಿ ಮಾಡಿರುತ್ತಾರೆ. ನಮ್ಮ ತಂದೆಯವರು ದಾವಾ ಆಸ್ತಿಯನ್ನು ಖರೀದಿಮಾಡುವುದಕ್ಕಿಂತ ಮುಂಚೆ ಪಹಣಿ ಪತ್ರಿಕೆ , ಮ್ಯುಟೇಷನ್ ಪತ್ರ ದಾಖಲೆಗಳನ್ನು ನೋಡಿ ಖರೀದಿ ಮಾಡಿರುತ್ತಾರೆ . 2 ಎಕರೆ 10 ಗುಂಟೆ ಸ್ವಾಧೀನವನ್ನು ಸಹಾ ನೋಡಿ ತೆಗೆದುಕೊಂಡಿರುತ್ತೇವೆ. ಸದರಿ ದಾವಾ ಆಸ್ತಿಯನ್ನು ಖರೀದಿ ಮಾಡಿದಾಗ ನನಗೆ ಸುಮಾರು 25 26 ವರುಷ ವಯಸ್ಸು ಇರಬಹುದು. ಈಗ ನನಗೆ 32 ವರುಷ ವಯಸ್ಸು. ದಿನಾಂಕ 9-5-2003 ರಂದು ಕ್ರಯ ಮಾಡಿಕೊಂಡಿರುತ್ತೇವೆ. ಕ್ರಯ ಮಾಡುವುದಕ್ಕಿಂತ ಮೊದಲು ಸರ್ವೆ ನಂ 3 ರ ಫೋಡಿ ಸರ್ವೆ ಸೆಟ್ಲಮೆಂಟ್ ಆದ ಬಗ್ಗೆ ನೋಡಿದ್ದೀರಾ ಎಂದರೆ ಸಾಕ್ಷಿಯು ಫೋಡಿ ತಪ್ಪಾಗಿತ್ತು ಅದನ್ನು ಸರಿ ಮಾಡಬೇಕು ಎಂದು ಕ್ರಮ ಕೈಗೊಂಡಿದ್ದೆವು ಎಂದು ನುಡಿಯುತ್ತಾರೆ. 1986 ರಲ್ಲಿ ಸರ್ವೆ ಸೆಟ್ಲಮೆಂಟ್ ಆಗಿರುತ್ತದೆ. ಸರ್ವೆ ಸೆಟ್ಲಮೆಂಟ್ 1983-84 ರಲ್ಲಿ ಆಗಿರುತ್ತದೆ 1986 ರಲ್ಲಿ ಅಲ್ಲ ಎಂದರೆ ಸಾಕ್ಷಿಯು ಸದರಿ ಸಮಯದಲ್ಲಿ ಹೆಚ್ಚು ಕಡಿಮೆ ಆಗಿರಬಹುದು ಎಂದು ನುಡಿಯು ತ್ತಾರೆ. 1983-84 ರಲ್ಲಿ ದಾವಾ ಆಸ್ತಿಯ ಮಾಲೀಕರು ಗೋಪಾಲಪ್ಪ ಮತ್ತು ನಾರಾಯಣಪ್ಪ ಎಂಬುವರು ಮಾಲೀಕರು ಇದ್ದರು. ಗೋಪಾಲಪ್ಪ ಮತ್ತು ನಾರಾಯಣಪ್ಪ ಫೋಡಿ ತಪ್ಪಾಗಿದ್ದ ಬಗ್ಗೆ ಮೇಲ್ಮನವಿ ಸಲ್ಲಿಸಿಲ್ಲ ಆದರೆ ತಪ್ಪಾದ ಬಗ್ಗೆ ನಮಗೆ ಸರಿಪಡಿಸಲು ಹೇಳಿದ್ದರು. ಗೋಪಾಲಪ್ಪ ಮತ್ತು ನಾರಾಯಣಪ್ಪರವರು ಅಂದಾಜು ಸುಮಾರು 20 ರಿಂದ 25 ವರುಷಗಳ ಕಾಲ ದಾವಾ

ಆಸ್ತಿಯನ್ನು ಹೊಂದಿದ್ದರು. 1999 ರಲ್ಲಿ ಗೋಪಾಲಪ್ಪರವರಿಂದ ಪ್ರಭಾಕರರವರಿಗೆ ದಾವಾ ಆಸ್ತಿಯು ಬಂದಿರುತ್ತದೆ. ಪ್ರಭಾಕರರವರೂ ಸಹಾ ಪೋಡಿ ಪ್ರಕರಣಕ್ಕೆ ಮೇಲ್ಮನವಿ ಸಲ್ಲಿಸಿರಲಿಲ್ಲ ಅವರೂ ಸಹಾ ಸರಿಪಡಿಸಿಕೊಳ್ಳಲು ಹೇಳಿದ್ದರು. 1983-84 ರಲ್ಲಿ ಗೋಪಾಲಪ್ಪರವರ ಹೆಸರಿಗೆ ಎಷ್ಟು ಜಮೀನು ನಮೂದು ಇತ್ತು ಎಂದರೆ ಸಾಕ್ಷಿಯು 83 ಗುಂಟೆ ನಮೂದಾಗಿತ್ತು ಅದು ತಪ್ಪು ಇರುತ್ತದೆ. ಪೋಡಿ ಆದಾಗ ಗೋಪಾಲಪ್ಪರವರಿಗೆ 2 ಎಕರೆ ಮಾತ್ರ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ನಾವು 2 ಎಕರೆ 10 ಗುಂಟೆ ಸ್ವಾ ಧೀನದಲ್ಲಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1983-84 ರಲ್ಲಿ ರೀ ಸರ್ವೆ ಸೆಟ್ಲಮೆಂಟ್ ಆದಾಗ ದುರ್ಗಪ್ಪ ತಂದೆ ರಂಗಪ್ಪರವರು 40 ಗುಂಟೆ ಸ್ವಾ ದೀನತೆ ಹೊಂದಿದ್ದಾರೆ ಎಂದು ನಮೂದು ಆಗಿತ್ತು ಎಂದರೆ ಸರಿ. ಆದರೆ ಅವರು ಸ್ವಾಧೀನದಲ್ಲಿ ಇರಲಿಲ್ಲ.

2. 1983-84 ರಲ್ಲಿ ಆದ ಸೆಟ್ಲಮೆಂಟ್ ಸರ್ವೆಯನ್ನು ನಾವು 2019 ರಲ್ಲಿ ಪ್ರಶ್ನಿಸಿದ್ದೇವೆ. ಸಾಕ್ಷಿ ಮುಂದುವರೆದು 2021 ರಲ್ಲಿ ಡಿಡಿಎಲ್ ಆರ್ ರವರು ಪೋಡಿಯನ್ನು ರದ್ದು ಮಾಡಿದರು. ಸದರಿ ಡಿಡಿಎಲ್ ಆರ್ ರವರ ಆದೇಶದ ವಿರುದ್ಧ ಪ್ರತಿವಾದಿಗಳು ಬೆಂಗಳೂರಿನ ಜೆಡಿಎಲ್ ಆರ್ ರವರಲ್ಲಿ ಪ್ರಶ್ನೆ ಮಾಡಿದ್ದಾರೆ ಎಂದರೆ ಸರಿ. ಗೋಪಾಲಪ್ಪ ಬಿನ್ ನಾರಾಯಣಪ್ಪ ಮತ್ತು ಪ್ರಭಾಕರ ರಾಯ್ಕರ್ ರವರು 1983-84 ರಲ್ಲಿ ಆದ ಸೆಟ್ಲಮೆಂಟ್ ಸರ್ವೆಗೆ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

3. ದಾವಾ ಆಸ್ತಿಯ ಎ ಶೆಡ್ಯೂಲ್ ನ ಪೂರ್ವಕ್ಕೆ ಉದ್ದೇಶಪೂರ್ವಕವಾಗಿ ವೆಂಕಟೇಶರವರ ಜಮೀನು ಇದೆ ಎಂದು ನಮೂದು ಮಾಡಿದ್ದೇವೆ ಎಂದರೆ ಸರಿಯಲ್ಲ. ಎ ಶೆಡ್ಯೂಲ್‌ನ ಆಸ್ತಿಯ ಪೂರ್ವಕ್ಕೆಪ್ರತಿವಾದಿಯ ಜಮೀನು ಬರುತ್ತದೆ ಎಂದರೆ ಸರಿಯಲ್ಲ.

ನಾವು ಉದ್ದೇಶಪೂರ್ವಕವಾಗಿ ಪೂರ್ವಕ್ಕೆ ಚಕ್ಕುಬಂದಿಯನ್ನು ತಪ್ಪಾಗಿ ನೀಡಿದ್ದೇವೆ ಎಂದರೆ ಸರಿಯಲ್ಲ.

4. ಏಪ್ರಿಲ್ 2018 ರ ಎರಡನೇ ವಾರದಂದು ಪ್ರತಿವಾದಿಗಳು ದಾವಾ ಆಸ್ತಿ ಬಿ ಶೆಡ್ಯೂಲ್ ಗೆ ಅಕ್ರಮ ಪ್ರವೇಶ ಮಾಡಿರುತ್ತಾರೆ . ಆಗ ಸಮಯ ಸುಮಾರು ಮಧ್ಯಾಹ್ನ 2.30 ಆಗಿತ್ತು. ದಾವಾ ಆಸ್ತಿಯ ಸುತ್ತಮುತ್ತ ಹಾಗೂ ಪ್ರತಿವಾದಿಯ ಆಸ್ತಿಗಳ ಸುತ್ತಮುತ್ತ ಎಲ್ಲವೂ ಜಮೀನುಗಳು ಇರುತ್ತವೆ. ಸದರಿ ಅಕ್ರಮಪ್ರವೇಶ ಮಾಡಿದಾಗ ಅಕ್ಕಪಕ್ಕದ ಜಮೀನಿನವರಾದ ವೆಂಕಟೇಶ , ರಾಮಪ್ಪರವರು ಇದ್ದರು. ಸದರಿ ವೆಂಕಟೇಶ ಎನ್ನುವವರು ಪ್ರತಿವಾದಿಯ ಮೇಲೆ ಸ್ವಾಧೀನವನ್ನು ಬಿಟ್ಟುಕೊಡಬೇಕು ಎಂದು ದಾವೆಯನ್ನು ಹಾಕಿದ್ದಾರೆ ಎಂದರೆ ಸರಿ. ನಾವು ಮತ್ತು ವೆಂಕಟೇಶರವರು ಶಾಮೀಲಾಗಿ ಪ್ರತಿವಾದಿಯ ಮೇಲೆ ಒಂದು ಸುಳ್ಳು ಕಾರಣ ತಯಾರಿಸಿ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ.

5. ನಾವು ಪ್ರಭಾಕರ ಬಿನ್ ಗೋವಿಂದ ರಾಯ್ಕರ್ ರವರರಿಂದ ಜಮೀನುಗಳನ್ನು ಖರೀದಿ ಮಾಡುವಾಗ ಅಳತೆ ಮಾಡಿಸಿರುತ್ತೇವೆ. ಖರೀದಿ ಮಾಡುವುದಕ್ಕಿಂತ ಮೂರು ದಿನ ಮೊದಲು 2003 ನೇ ಇಸವಿಯಲ್ಲಿ ಜಮೀನುಗಳನ್ನು ಅಳತೆ ಮಾಡಿಸಿರುತ್ತೇವೆ. ಅಳತೆ ಮಾಡಿದ್ದೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ಪ್ರತಿವಾದಿಯು ಬಿ ಶೆಡೂಲ್ ಆಸ್ತಿಯನ್ನು ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಹಾಗೂ ಪ್ರತಿವಾದಿಯು ನಿರಂತರವಾಗಿ 40 ವರುಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ.

6. ನಾನು ಹೇಳಿದಂತೆ ಏಪ್ರಿಲ್ ತಿಂಗಳ ಎರಡನೇ ವಾರವು 2018 ನೇ ಇಸವಿಯಲ್ಲಿ ಪ್ರತಿವಾದಿಯು ಅಕ್ರಮ ಪ್ರವೇಶ ಮಾಡಲು ಬಂದಿದ್ದಕ್ಕೆ ಪೋಲೀಸರಿಗೆ ದೂರು ನೀಡಿಲ್ಲ ಆದರೆ

ನ್ಯಾಯಾಲಯಕ್ಕೆ ಬಂದಿರುತ್ತೇವೆ. ನಾವು ನ್ಯಾಯಾಲಯಕ್ಕೆ ಬಿಸಿಎಫ್ ಎಂದು ನಕ್ಷೆಯನ್ನು ಪ್ರತಿವಾದಿಯು ಒತ್ತುವರಿ ಮಾಡಿದ್ದಾರೆ ಎಂದು ಈ ದಾವೆಗೋಸ್ಕರ ಸೃಷ್ಟಿ ಮಾಡಿ ಹಾಕಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದಿಯು ಗೂಂಡಾ ಆಗಿದ್ದು ಹಾಗೂ ರಾಜಕೀಯ ಪ್ರಭಾವದ ವ್ಯಕ್ತಿಯಾಗಿದ್ದಾನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲ. ಪ್ರತಿವಾದಿಯ ಗಂಡ ನರಸಿಂಹಮೂರ್ತಿ ಗೂಂಡಾ ವರ್ತನೆ ಹೊಂದಿದ್ದಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಕಂಡಿಕೆ 4 ರಲ್ಲಿ ಹೇಳಿದಂತೆ ಪ್ರತಿವಾದಿಯರು ನಾನು ಹೇಳುವ 14 ಗುಂಟೆ ಒತ್ತುವರಿಮಾಡಿದ್ದ ಜಮೀನನ್ನು ಹಿಂದಿರುಗಿಸುತ್ತಾರೆ ಎಂದು ಒಪ್ಪಿಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ , ಆದರೆ ಮಾತುಕತೆ ಸಮಯದಲ್ಲಿ ಬಿಟ್ಟುಕೊಡುತ್ತೇವೆ ಎಂದು ಹೇಳಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಬಿಟ್ಟುಕೊಡುತ್ತೇವೆ ಎಂದು ನನ್ನ ಮತ್ತು ನನ್ನ ತಂದೆ ಮುಂದೆ ಹೇಳಿದ್ದರು. ಆರೀತಿ ಪ್ರತಿವಾದಿಗಳು ನನ್ನ ಮತ್ತು ನನ್ನ ತಂದೆ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ.

7. 1960 ರಿಂದ ರಂಗಪ್ಪ ಬಿನ್ ಹುಲಿಯಪ್ಪ ಎನ್ನುವವರು ಸರ್ವೆ ನಂ 3 ರಲ್ಲಿ 1 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಸದರಿ 1 ಎಕರೆಯು ನಾವು ಹಾಕಿದ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸಾಕ್ಷಿಯು ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದು ಹೇಳುತ್ತಾರೆ. ದುರ್ಗಪ್ಪ ಬಿನ್ ಹನುಮಂತಪ್ಪ ಪ್ರತಿವಾದಿಗೆ ಯಾವ ರೀತಿ ಸಂಬಂಧ ಆಗಬೇಕು ಎಂದರೆ ಸಾಕ್ಷಿಯು ಅವರು ಸಂಬಂಧಿಕರು ಆದರೆ ಯಾವ ರೀತಿ ಸಂಬಂಧಿಕರು ಎಂದು ಗೊತ್ತಿಲ್ಲ. ಸದರಿ ದುರ್ಗಪ್ಪ ತಂದೆ ಹನಮಂತಪ್ಪ ಎನ್ನುವವರು ಮಂಜಪ್ಪ ಬಿನ್ ಭವಾನಪ್ಪ ರವರ ಕಡೆಯಿಂದ 1960 ರಲ್ಲಿ 1 ಎಕರೆ ಜಮೀನನ್ನು ನೋಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಆ ರೀತಿ ಖರೀದಿ ಪತ್ರ ಇಲ್ಲ ಎಂದು

ಹೇಳುತ್ತಾರೆ. ಸರ್ವೆ ನಂಬರು 3 ವು ಎಷ್ಟು ಎಕರೆ ಇರುತ್ತದೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಮಾಡಿದ್ದೀರಾ ಎಂದರೆ ಹಾಜರುಮಾಡಿದ್ದೇವೆ ಅದು 3 ಎಕರೆ 3 ಗುಂಟೆ ಇರುತ್ತದೆ.

( ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು).

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.